## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **344** |
| ಸದಸ್ಯರ ಹೆಸರು | : | ಶ್ರೀ ಟಿ.ಎ. ಶರವಣ<br>(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : | ಸಾರಿಗೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 19.08.2026 |

| | ಪ್ರಶ್ನೆ | ಉತ್ತರ |
|---|---|---|
| (ಅ) | ಏಕವ್ಯಕ್ತಿ ಸಮಿತಿಯ ವಿಚಾರಣೆಯಲ್ಲಿರುವ ಆಕ್ಸ್‌ಫರ್ಡ್ ಸಂಜೆ ಕಾಲೇಜಿಗೆ ಅಕ್ರಮ ಪ್ರವೇಶ ಪಡೆದಿರುವ 46 ಗ್ರೂಪ್-ಸಿ ಆರೋಪಿತ ನೌಕರರ ವಿರುದ್ಧ ಯಾವಾಗ ಶಿಸ್ತುಕ್ರಮ ಕೈಗೊಳ್ಳಲಾಗುವುದು; (ಅವರ ಹೆಸರು, ಪದನಾಮ, ಕಛೇರಿಯ ವಿವರಗಳನ್ನು ನೀಡುವುದು); | ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪ್ರಸ್ತಾವನೆಯಂತೆ ಸರ್ಕಾರದ ಆದೇಶ ಸಂಖ್ಯೆ:ಟಿಡಿ 30 ಟಿಡಿಎಸ್ 2025 ಬೆಂಗಳೂರು, ದಿನಾಂಕ: 10-03-2026 ಮತ್ತು ದಿನಾಂಕ:27.05.2026ರ ಆದೇಶಗಳಲ್ಲಿ ಸಾರಿಗೆ ಇಲಾಖೆಯ ಗ್ರೂಪ್-ಸಿ ನೌಕರರು ಸಂಜೆ ಕಾಲೇಜುಗಳಲ್ಲಿ ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ (Admission) ಪಡೆಯಲು ಸಲ್ಲಿಸಿರುವ ಸೇವಾನುಭವ ಪ್ರಮಾಣ ಪತ್ರಗಳ ನೈಜತೆ ಹಾಗೂ ಪ್ರವೇಶಾತಿಯ ಬಗ್ಗೆ ತನಿಖೆ/ವಿಚಾರಣೆ ನಡೆಸಿ ವರದಿ ಸಲ್ಲಿಸಲು ಶ್ರೀ ಎನ್. ನಾರಾಯಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಇವರ ಅಧ್ಯಕ್ಷತೆಯಲ್ಲಿ ಏಕವ್ಯಕ್ತಿ ಸಮಿತಿಯನ್ನು ರಚಿಸಿ 03 ತಿಂಗಳ ಅವಧಿಯಲ್ಲಿ ವರದಿ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ. ಸದರಿ ಆದೇಶಗಳ ಪ್ರತಿಗಳನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ.<br><br>ಪ್ರಸ್ತುತ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರೂಪ್-ಸಿ ನೌಕರರುಗಳಾದ ಶ್ರೀ ಶಶಿಕುಮಾರ್ ಎನ್ ಮತ್ತು ಇತರರು ಏಕವ್ಯಕ್ತಿ ಸಮಿತಿಯನ್ನು ರಚಿಸಿರುವ ಸರ್ಕಾರದ ದಿನಾಂಕ:10.03.2026 ರ ಆದೇಶವನ್ನು ಪ್ರಶ್ನಿಸಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 24150/2026 ರಂತೆ ದಾಖಲಿಸಿರುತ್ತಾರೆ. ಸದರಿ ರಿಟ್ ಅರ್ಜಿಯಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:12-08-2026 ರಂದು ನೀಡಿರುವ ಮಧ್ಯಂತರ ಆದೇಶದಲ್ಲಿ, ಏಕವ್ಯಕ್ತಿ ಸಮಿತಿಯ ವಿಚಾರಣಾ ಆದೇಶ ಸಂಖ್ಯೆ:ಟಿಡಿ 30 ಟಿಡಿಎಸ್ 2025 ದಿನಾಂಕ:10-03-2026 ಕ್ಕೆ ತಡೆಯಾಜ್ಞೆಯನ್ನು ನೀಡಲಾಗಿರುತ್ತದೆ. ಸದರಿ |



File No. TD-47/TDO/2026-DO-Trans (Computer No. 2264588)

| | | |
|---|---|---|
| | | ಪ್ರಕರಣದಲ್ಲಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಆ | ಸಾರಿಗೆ ಇಲಾಖೆಯಲ್ಲಿ ಲಿಪಿಕ ನೌಕರರು 2023ರ ಮೊದಲು ವಿದ್ಯಾರ್ಹತೆ ಪಡೆದಿರುವ ಹಾಗೂ 2023ರ ತದನಂತರ (ಪ್ರತ್ಯೇಕ) ಆಕ್ಸ್‌ಫರ್ಡ ಸಂಜೆ ಕಾಲೇಜಿನಲ್ಲಿ DIP in AUTO/MECH ಪದವಿ ಪಡೆದಿರುವ / ವ್ಯಾಸಾಂಗ ಮಾಡುತ್ತಿರುವ (ಈವರೆಗೆ) ಸಿಬ್ಬಂದಿಗಳ ಹೆಸರು, ಪದನಾಮ, ಕಛೇರಿಯ ವಿವರಗಳನ್ನು ನೀಡುವುದು; | ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| ಇ | ಗ್ರೂಪ್-ಸಿ ಸಿಬ್ಬಂದಿಯ ಸಂಯೋಜಿತ ಜೇಷ್ಟತೆ ಮೇರೆಗೆ ಶೇಕಡ 5 ರಷ್ಟು ಮೋಟಾರು ವಾಹನ ನಿರೀಕ್ಷಕರ ಹುದ್ದಯಿ ಬಡ್ತಿಗೆ ಸಂಬಂಧಿಸಿದಂತೆ ಹಾಲಿ ಇರುವ ವೃಂದ ಮತ್ತು ನೇಮಕಾತಿಯ ನಿಯಮಗಳಲ್ಲಿ ಯಾವ ನಿಯಮಕ್ಕೆ ತಿದ್ದುಪಡಿ ಮಾಡುವ ಬಗ್ಗೆ ಪ್ರಸ್ತಾವನೆಯು ಸರ್ಕಾರದಲ್ಲಿದೆ; ತಿದ್ದುಪಡಿಯ ಸಂಪೂರ್ಣ ವಿವರಗಳನ್ನು ನೀಡುವುದು ಹಾಗೂ ಅದರ ಅವಶ್ಯಕತೆ ಕುರಿತು ಮಾಹಿತಿ ಒದಗಿಸುವುದು; | ದಿನಾಂಕ:04-07-2026 ರಂದು ಸಾರಿಗೆ ಆಯುಕ್ತರ ಕಛೇರಿಯ ಹಂತದಲ್ಲಿ ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ/ಪರಿಷ್ಕರಣೆ/ಪುನರ್ ರಚನ ಸಮಿತಿ ಸಭೆಯಲ್ಲಿ ಮೋಟಾರು ವಾಹನ ನಿರೀಕ್ಷಕರ ಬಡ್ತಿಗೆ ಸಂಬಂಧಿಸಿದ ಈ ಕೆಳಕಂಡ ಎರಡು (2) ಅಂಶಗಳಿಗೆ ತಿದ್ದುಪಡಿ ಮಾಡಲು ತಿರ್ಮಾನಿಸಲಾಗಿದೆ.<br>I. ನಿಗಧಿಪಡಿಸಲಾದ ಶೈಕ್ಷಣಿಕ ಅರ್ಹತೆಯನ್ನು ಪಡೆದ ನಂತರ 3 ವರ್ಷಗಳನ್ನು ಪೂರೈಸಿರಬೇಕು ಎನ್ನುವ ಮಾನದಂಡವನ್ನು ಕೈಬಿಡಲು<br>II. ಮೋಟಾರು ವಾಹನ ನಿರೀಕ್ಷಕರ ಬಡ್ತಿಗೆ ನಿಗಧಿಪಡಿಸಿದ ಗರಿಷ್ಠ 50 ವರ್ಷದ ವಯೋಮಿತಿಯನ್ನು 55 ವರ್ಷಕ್ಕೆ ಹೆಚ್ಚಿಸಲು.<br>ಅದರಂತೆ ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ದಿನಾಂಕ:04.07.2026 ರಂದು ಸರ್ಕಾರಕ್ಕೆ ತಿದ್ದುಪಡಿ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಸದರಿ ಸಭೆಯ ನಡವಳಿ ಮತ್ತು ಸಾರಿಗೆ ಆಯುಕ್ತರ ಪ್ರಸ್ತಾವನೆಯನ್ನು **ಅನುಬಂಧ-3**ರಲ್ಲಿ ಒದಗಿಸಲಾಗಿದೆ.<br>ಇಲಾಖೆಯಲ್ಲಿ ಮೋಟಾರು ವಾಹನ ನಿರೀಕ್ಷಕರ ಕೊರತೆಯಿದ್ದು, ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ನಿಗದಿಪಡಿಸಿರುವ |

| | | |
|---|---|---|
| | | ವಿದ್ಯಾರ್ಹತೆಯನ್ನು ಪೂರೈಸಿರುವ ಇಲಾಖೆಯ ಲಿಪಿಕ ನೌಕರರಿಗೆ ಕಾಲ-ಕಾಲಕ್ಕೆ ಪದೋನ್ನತಿ ನೀಡಬೇಕಾಗಿರುವುದರಿಂದ ಮತ್ತು ಪದೋನ್ನತಿ/ನಿವೃತ್ತಿಯಿಂದಾಗಿ ಖಾಲಿ ಉಳಿದಿರುವ ಹುದ್ದೆಗಳನ್ನು ತುಂಬುವ ಅವಶ್ಯಕತೆ ಇರುವುದರಿಂದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಪ್ರಸ್ತಾಪಿಸಲಾಗಿರುತ್ತದೆ. |
| ಈ | ಖಾಲಿಯಿರುವ 12 ಮೋಟಾರು ವಾಹನ ನಿರೀಕ್ಷಕರ ಬಡ್ತಿ ಹುದ್ದೆಗೆ 2023ರ ಮೊದಲು ವಿದ್ಯಾರ್ಹತೆ ಹೊಂದಿರುವ ಪ್ರಸ್ತುತ ಅರ್ಹ ಸಿಬ್ಬಂದಿಗಳಿಗೆ ಬಡ್ತಿ ನೀಡದಿರಲು ಕಾರಣವೇನು; ಆರೋಪಿತ ಕಾನೂನು ಬಾಹಿರ ಖಾಸಗಿ ಕಂಪನಿ / ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸಿರುವ ಏಕವ್ಯಕ್ತಿ ಸಮಿತಿಯ ವಿಚಾರಣೆಯಲ್ಲಿರುವ 46 ಗ್ರೂಪ್-ಸಿ ಸಿಬ್ಬಂದಿಗಳಿಗೆ ಬಡ್ತಿ ಕಲ್ಪಿಸುವ ಪ್ರಸ್ತಾಪಿತ ವೃಂದ ಮತ್ತು ನೇಮಕಾತಿಯ ನಿಯಮಗಳ ತಿದ್ದುಪಡಿಯ ಮೂಲ ಉದ್ದೇಶವೇನು; ಪ್ರಸ್ತುತ ಅರ್ಹ ನೈಜ ವಿದ್ಯಾರ್ಹತೆ ಇರದ ಕಾರಣ ಸರ್ಕಾರ ಈ ತಿದ್ದುಪಡ್ಡಿಯನ್ನು ಕೈಬಿಡುವುದೇ? (ಮಾಹಿತಿ ನೀಡುವುದು) | ಇಲಾಖೆಯಲ್ಲಿ ಮಂಜೂರಾದ 430 ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿದ್ದು, 2022 ರಲ್ಲಿ ಹೊಸದಾಗಿ ಶೇಕಡ 5 ರಷ್ಟು (22) ಹುದ್ದೆಗಳನ್ನು ಮುಂಬಡ್ತಿಗೆ ಮೀಸಲಿರಿಸಿ ಆದೇಶಿಸಲಾಗಿರುತ್ತದೆ. ಆದರನ್ವಯ ಈಗಾಗಲೇ 10 ಪ್ರಥಮ ದರ್ಜೆ ಸಹಾಯಕರುಗಳಿಗೆ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳಿಗೆ ಮುಂಬಡ್ತಿಯನ್ನು ನಿಯಮಾನುಸಾರ ನೀಡಲಾಗಿದೆ. ಈ ಹಿಂದೆ ದಿನಾಂಕ: 28-05-2025 ರಂದು ಇಲಾಖಾ ಮುಂಬಡ್ತಿ ಸಭೆ ಜರುಗಿಸಿ ಅರ್ಹ ನೌಕರರುಗಳಿಗೆ ಪದೋನ್ನತಿ ನೀಡಲಾಗಿರುತ್ತದೆ. ಪ್ರಸ್ತುತ, ಮುಂಬಡ್ತಿಗೆ ಅರ್ಹರಿರುವ ನೌಕರರುಗಳಿಗೆ ನಿಯಮಾನುಸಾರ ಮುಂಬಡ್ತಿ ನೀಡುವ ಬಗ್ಗೆ ಕ್ರಮ ವಹಿಸಲಾಗುವುದು.<br><br>ಪ್ರಸ್ತುತ ಇಲಾಖೆಯಲ್ಲಿ ಮೋಟಾರು ವಾಹನ ನಿರೀಕ್ಷಕರ ವೃಂದದಲ್ಲಿ ಒಟ್ಟು 430 ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ, 154 ಹುದ್ದೆಗಳು ಭರ್ತಿಯಾಗಿದ್ದು, 276 ಹುದ್ದೆಗಳು ಖಾಲಿ ಇರುತ್ತವೆ ಹಾಗೂ ಹಿರಿಯ ಮೋಟಾರು ವಾಹನ ನಿರೀಕ್ಷಕರ ವೃಂದದಲ್ಲಿ 214 ಮಂಜೂರಾದ ಹುದ್ದೆಗಳಿದ್ದು, 119 ಹುದ್ದೆಗಳು ಭರ್ತಿಯಾಗಿದ್ದು, 95 ಹುದ್ದೆಗಳು ಖಾಲಿ ಇರುತ್ತವೆ. ಇಲಾಖೆಯ ಕಾರ್ಯ ಒತ್ತಡ ಹೆಚ್ಚಾಗಿದ್ದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಅವಶ್ಯಕತೆ ಇರುತ್ತದೆ. ಈ ಹಿಂದೆ ಇಲಾಖೆಯಿಂದ ಕೈಗೊಂಡ ನೇಮಕಾತಿ ಪ್ರಕ್ರಿಯೆಗಳಿಗೆ ನ್ಯಾಯಾಲಯಗಳಿಂದ ತಡೆಯಾಜ್ಞೆ ಇರುವುದರಿಂದ ಇಲಾಖೆಯಲ್ಲಿ ಹೆಚ್ಚಿನ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳು ಖಾಲಿ ಉಳಿದಿರುತ್ತವೆ. |

ಟಿಡಿ 67 ಟಿಡಿಕ್ಯೂ 2026

(ಬಿ.ಎಸ್. ಸುರೇಶ)
ಸಾರಿಗೆ ಸಚಿವರು.

ಅನುಬಂಧ-1

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸಾರಿಗೆ ಇಲಾಖೆಯ ಗ್ರೂಪ್-ಸಿ ನೌಕರರು ಡಿಪ್ಲೋಮಾ ಪದವಿಗಾಗಿ ಸಂಜೆ ಕಾಲೇಜುಗಳಿಗೆ ಪ್ರವೇಶ ಪಡೆಯಲು ಸಲ್ಲಿಸಿರುವ ಸೇವಾನುಭವ ಪ್ರಮಾಣಪತ್ರಗಳು ಹಾಗೂ ಪ್ರವೇಶಾತಿಗಳ ನೈಜತೆ ಬಗ್ಗೆ ತನಿಖೆ/ವಿಚಾರಣೆ ನಡೆಸಿ ವರದಿ ಸಲ್ಲಿಸಲು ಏಕವ್ಯಕ್ತಿ ಸಮಿತಿ ರಚಿಸುವ ಕುರಿತು

ಓದಲಾಗಿದೆ:

1. ಶ್ರೀ ನೀಲನಾಯಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ(ಭೀಮವಾದ) ಇವರ ದೂರು ದಿನಾಂಕ: 09-04-2025
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪತ್ರ ಸಂಖ್ಯೆ: ಸಾಆ/ಸಿಬ್ಬಂದಿ-04/ವೈವ-19/2025-26, ದಿನಾಂಕ: 09-05-2025
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ವರದಿ ಸಂಖ್ಯೆ:DTE-ADMICM2/49/2025 ದಿನಾಂಕ: 09-02-2026
4. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪತ್ರ ಸಂಖ್ಯೆ: ಸಾಆ/ಸಿಬ್ಬಂದಿ-04/ವೈವ-19/2025-26, ದಿನಾಂಕ: 03-03-2026

*****

**ಪ್ರಸ್ತಾವನೆ:**

ಓದಲಾದ ಕ್ರಮ ಸಂಖ್ಯೆ **(1)** ರ ಶ್ರೀ ನೀಲನಾಯಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ(ಭೀಮವಾದ) ಇವರ ದೂರಿನಲ್ಲಿ ಸಾರಿಗೆ ಇಲಾಖೆಯ 80 ಲಿಪಿಕ /ಚಾಲಕ ವೃಂದದ ನೌಕರರು ಆರ್ಕ್ ಫರ್ಡ್ ಸಂಜೆ ಪಾಲಿಟೆಕ್ನಿಕ್ ಕಾಲೇಜು, ಜೆ.ಪಿ. ನಗರ, ಬೆಂಗಳೂರು ಇಲ್ಲಿ ಕಾನೂನು ಬಾಹಿರವಾಗಿ ಪ್ರವೇಶ ಪಡೆದು ವ್ಯಾಸಾಂಗ ಮಾಡುತ್ತಿರುವ ಕುರಿತು ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮವಹಿಸುವಂತೆ ಕೋರಲಾಗಿದೆ

ಓದಲಾದ ಕ್ರಮ ಸಂಖ್ಯೆ **(2)** ರ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪತ್ರದಲ್ಲಿ ಶ್ರೀ ನೀಲನಾಯಕ, ಕರ್ನಾಟಕ ದಲಿತ ಸಂಘರ್ಷ ಸಮಿತಿ(ಭೀಮವಾದ) ಇವರ ದೂರಿನಲ್ಲಿ ಪ್ರಸ್ತಾಪಿಸಿರುವ ಎಲ್ಲಾ ಅಂಶಗಳ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರನ್ನು ಕೋರಲಾಗಿರುತ್ತದೆ

ಓದಲಾದ ಕ್ರಮ ಸಂಖ್ಯೆ **(3)** ರ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ವರದಿಯಲ್ಲಿ ಅರೆಕಾಲಿಕ ಡಿಪ್ಲೊಮಾ ಕೋರ್ಸುಗಳ ಪ್ರವೇಶಾತಿಗೆ 02 ವರ್ಷಗಳ ತಾಂತ್ರಿಕ ಸೇವಾನುಭವದೊಂದಿಗೆ ಸಂಬಂಧಪಟ್ಟ ತಾಂತ್ರಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರಬೇಕು ಎಂದು ತಿಳಿಸುತ್ತಾ, ದೂರಿನಲ್ಲಿ ನಮೂದಿಸಿದ 49 ವಿದ್ಯಾರ್ಥಿಗಳ ಪ್ರವೇಶದ ಸಂಪೂರ್ಣ ತನಿಖಾ ವರದಿಯೊಂದಿಗೆ ಎರಡು ವರ್ಷದ ತಾಂತ್ರಿಕ ಸೇವಾನುಭವ ನೈಜತೆಯನ್ನು ಸಾರಿಗೆ ಇಲಾಖೆಯ ಹಂತದಲ್ಲಿಯೇ ಪರಿಶೀಲಿಸಿ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಕೋರಲಾಗಿತ್ತು.

ಓದಲಾದ ಕ್ರಮ ಸಂಖ್ಯೆ **(4)** ರ ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪತ್ರದಲ್ಲಿ ಸಂಬಂಧಪಟ್ಟ ಕಾಲೇಜು/ತಾಂತ್ರಿಕ ಶಿಕ್ಷಣ ಇಲಾಖೆಯು ಅರೆಕಾಲಿಕ ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ( Admission) ನೀಡುವ ಸಂದರ್ಭದಲ್ಲಿ ಪ್ರವೇಶ ಪಡೆಯುವ ಕೋರ್ಸ್ ಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಅಭ್ಯರ್ಥಿಗಳಿಂದ ಪಡೆದು ಪ್ರವೇಶ ನೀಡಬೇಕಾಗಿರುತ್ತದೆ ಅಲ್ಲದೇ, ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗೆ 02 ವರ್ಷಗಳ ತಾಂತ್ರಿಕ ಸೇವಾನುಭವದೊಂದಿಗೆ ಸಂಬಂಧಪಟ್ಟ ತಾಂತ್ರಿಕ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವ ಪ್ರಮಾಣಪತ್ರಗಳ ನೈಜತೆಯ ಬಗ್ಗೆ ಪರಿಶೀಲನೆಯನ್ನು ಕೋರ್ಸುಗಳಿಗೆ ಪ್ರವೇಶ ನೀಡಿದ ಸಂಬಂಧಪಟ್ಟ ಕಾಲೇಜು/ತಾಂತ್ರಿಕ ಶಿಕ್ಷಣ ಇಲಾಖೆಯಿಂದ ನಡೆಸಬೇಕಾಗಿರುತ್ತದೆ ಆದುದರಿಂದ ಸೇವಾನುಭವ ಪ್ರಮಾಣ ಪತ್ರಗಳ ನೈಜತೆಯನ್ನು ಸಾರಿಗೆ ಇಲಾಖೆಯಿಂದ ಪರಿಶೀಲಿಸಲು ಅವಕಾಶವಿರುವುದಿಲ್ಲದಿರುವುದರಿಂದ ಸೇವಾನುಭವ ಪ್ರಮಾಣಪತ್ರಗಳ ನೈಜತೆ ಹಾಗೂ ಪ್ರವೇಶಾತಿಗಳ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅನುಮೋದಿತ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ತಾಂತ್ರಿಕ ಶಿಕ್ಷಣ ಇಲಾಖೆಯನ್ನೊಳಗೊಂಡಂತೆ ತನಿಖೆ ನಡೆಸುವುದು ಸೂಕ್ತವೆಂದು ಅಭಿಪ್ರಾಯಿಸಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ

ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಸಾರಿಗೆ ಇಲಾಖೆಯ ಗ್ರೂಪ್-ಸಿ ನೌಕರರುಗಳು ಸಂಜೆ ಕಾಲೇಜುಗಳಲ್ಲಿ ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ಪಡೆಯಲು ಸಲ್ಲಿಸಿರುವ ಸೇವಾನುಭವ ಮತ್ತು ಪ್ರವೇಶಾತಿಯ ನೈಜತೆಯ ಬಗ್ಗೆ ತನಿಖೆ/ವಿಚಾರಣೆ ನಡೆಸಿ ವರದಿ ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ: ಲಾ-ಎಲ್‌ಎಂ/162/2024, ದಿನಾಂಕ: 05-08-2025ರ ಆದೇಶದನ್ವಯ ನಿವೃತ್ತ ನ್ಯಾಯಾಧೀಶರೊಬ್ಬರ ನೇತೃತ್ವದಲ್ಲಿ ಏಕವ್ಯಕ್ತಿ ಸಮಿತಿಯನ್ನು ರಚಿಸಲು ನಿರ್ಧರಿಸಿದೆ. ಅದರಂತೆ, ಈ ಆದೇಶ

**<u>ಸರ್ಕಾರಿ ಆದೇಶ ಸಂಖ್ಯೆ: ಟಿಡಿ 30 ಟಿಡಿಎಸ್ 2025,</u>**
**<u>ಬೆಂಗಳೂರು, ದಿನಾಂಕ: 10.03.2026</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಾರಿಗೆ ಇಲಾಖೆಯ ಗ್ರೂಪ್-ಸಿ ನೌಕರರು ಸಂಜೆ ಕಾಲೇಜುಗಳಲ್ಲಿ ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ ( Admission) ಪಡೆಯಲು ಸಲ್ಲಿಸಿರುವ ಸೇವಾನುಭವ ಪ್ರಮಾಣ ಪತ್ರಗಳ ನೈಜತೆ ಹಾಗೂ ಪ್ರವೇಶಾತಿಯ ಬಗ್ಗೆ ತನಿಖೆ/ವಿಚಾರಣೆ ನಡೆಸಿ ವರದಿ ಸಲ್ಲಿಸಲು **ಶ್ರೀ ಎನ್. ನಾರಾಯಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 226, 3ನೇ 'ಇ' ಕ್ರಾಸ್, 3ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು-560043** ಇವರ ಅಧ್ಯಕ್ಷತೆಯ ಏಕವ್ಯಕ್ತಿ ಸಮಿತಿಯನ್ನು ಈ ಕೆಳಕಂಡ ನಿಬಂಧನೆ / ಷರತ್ತುಗಳಿಗೊಳಪಟ್ಟು ರಚಿಸಿ ಆದೇಶಿಸಿದೆ.

ಮುಂದುವರೆದು, ಸದರಿ ಸಮಿತಿಯು ಕಾರ್ಯ ನಿರ್ವಹಿಸಲು ಅಗತ್ಯವಿರುವ ಸ್ಥಳಾವಕಾಶ, ಕಛೇರಿ ಪೀಠೋಪಕರಣಗಳು ಅಗತ್ಯ ಸಿಬ್ಬಂದಿ ಮತ್ತು ನಿಯಮಾನುಸಾರ ಇತರೆ ಸೌಕರ್ಯಗಳನ್ನು ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಮತ್ತು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರುಗಳು ಒದಗಿಸತಕ್ಕದ್ದು.

1. ಸದರಿ ಸಮಿತಿಯ ತನಿಖೆ/ವಿಚಾರಣೆ ನಡೆಸುವ ಸಲುವಾಗಿ ಸಾರಿಗೆ ಇಲಾಖೆಯ/ ಶಿಕ್ಷಣ ಇಲಾಖೆಯ ಯಾವುದೇ ಕಛೇರಿ/ಕಾಲೇಜುಗಳಿಗೆ ಭೇಟಿ ನೀಡುವ ಸಲುವಾಗಿ ಕೈಗೊಳ್ಳುವ ಪ್ರಯಾಣದ ಭತ್ಯೆಯನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಅನುಸಾರ ಪಡೆಯಲು ಅರ್ಹವಿದ್ದು. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರು ನಿಯಮಾನುಸಾರ ಭರಿಸತಕ್ಕದ್ದು.

2. ಸದರಿ ಸಮಿತಿಯು ತನಿಖೆ/ವಿಚಾರಣೆ ನಡೆಸುವ ಸಲುವಾಗಿ ವಿವಿಧ ಕಛೇರಿಗಳಿಗೆ/ ಕಾಲೇಜುಗಳಿಗೆ ಭೇಟಿ ನೀಡಿದ್ದಲ್ಲಿ, ಸಂಬಂಧಿಸಿದವರು ಅವಶ್ಯವಿರುವ ಎಲ್ಲಾ ಮಾಹಿತಿ / ದಾಖಲೆಗಳನ್ನು ಕಡ್ಡಾಯವಾಗಿ ಒದಗಿಸುವುದು

3. ಈ ಸಮಿತಿಯು ವರದಿಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವುದು

4. ಸಮಿತಿಯ ಅಧ್ಯಕ್ಷರಿಗೆ ನೀಡುವ ಸಂಭಾವನೆಯ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪುಷ್ಪ ವಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, 1ನೇ ಮಹಡಿ, 'ಎ' ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ, ಶಾಂತಿನಗರ ಬೆಂಗಳೂರು-560027
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ, ಬೆಂಗಳೂರು-560001
4. ಶ್ರೀ ಎನ್. ನಾರಾಯಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, **ನಂ. 226, 3ನೇ 'ಇ' ಕ್ರಾಸ್, 3ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು-560043 (ಸ್ಪೀಡ್ ಪೋಸ್ಟ್ ಮೂಲಕ)**

ಪ್ರತಿ:

1 ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು

2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ. ಸಾರಿಗೆ ಇಲಾಖೆ

3 ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು

4 ಸರ್ಕಾರದ ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಾರಿಗೆ ಇಲಾಖೆ

5 ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಾರಿಗೆ ಇಲಾಖೆಯ ಗ್ರೂಪ್-ಸಿ ನೌಕರರು ಡಿಪ್ಲೋಮಾ ಪದವಿಗಾಗಿ ಸಂಜೆ ಕಾಲೇಜುಗಳಿಗೆ ಪ್ರವೇಶ ಪಡೆಯಲು ಸಲ್ಲಿಸಿರುವ ಸೇವಾನುಭವ ಪ್ರಮಾಣಪತ್ರಗಳು ಹಾಗೂ ಪ್ರವೇಶಾತಿಗಳ ನೈಜತೆ ಬಗ್ಗೆ ತನಿಖೆ/ವಿಚಾರಣೆ ನಡೆಸಿ ವರದಿ ಸಲ್ಲಿಸಲು ರಚಿಸಲಾದ ಏಕವ್ಯಕ್ತಿ ಸಮಿತಿಯ ಕಾಲಮಿತಿಯನ್ನು ನಿಗದಿಪಡಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಟಿಡಿ 30 ಟಿಡಿಎಸ್ 2025, ದಿನಾಂಕ: 10.03.2026
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪತ್ರ ಸಂಖ್ಯೆ: ಸಾಆ/ಸಿಬ್ಬಂದಿ-08/ವೃವ-93/2025-26, ದಿನಾಂಕ: 11-05-2026

*****

**ಪ್ರಸ್ತಾವನೆ:**

ಓದಲಾದ ಕ್ರಮ ಸಂಖ್ಯೆ**(1)** ರ ಆದೇಶದಲ್ಲಿ ಸಾರಿಗೆ ಇಲಾಖೆಯ ಗ್ರೂಪ್-ಸಿ ನೌಕರರು ಸಂಜೆ ಕಾಲೇಜುಗಳಲ್ಲಿ ಡಿಪ್ಲೊಮಾ ಕೋರ್ಸ್‌ಗಳಿಗೆ ಪ್ರವೇಶ (Admission) ಪಡೆಯಲು ಸಲ್ಲಿಸಿರುವ ಸೇವಾನುಭವ ಪ್ರಮಾಣ ಪತ್ರಗಳ ನೈಜತೆ ಹಾಗೂ ಪ್ರವೇಶಾತಿಯ ಬಗ್ಗೆ ತನಿಖೆ/ವಿಚಾರಣೆ ನಡೆಸಿ ವರದಿ ಸಲ್ಲಿಸಲು ಶ್ರೀ ಎನ್. ನಾರಾಯಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 226, 3ನೇ ಇ ಕ್ರಾಸ್, 3ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು-560043 ಇವರ ಅಧ್ಯಕ್ಷತೆಯ ಏಕವ್ಯಕ್ತಿ ಸಮಿತಿಯನ್ನು ನಿಬಂಧನೆ / ಷರತ್ತುಗಳಿಗೊಳಪಟ್ಟು ರಚಿಸಿ ಆದೇಶಿಸಲಾಗಿದೆ.

ಓದಲಾದ ಕ್ರಮ ಸಂಖ್ಯೆ**(2)** ರ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪತ್ರದಲ್ಲಿ **ಸರ್ಕಾರದ ಆದೇಶ ಸಂಖ್ಯೆ ಟಿಡಿ** 30 **ಟಿಡಿಎಸ್** 2025, ದಿನಾಂಕ: 10.03.2026ರನ್ವಯ ರಚಿಸಲಾದ ಏಕವ್ಯಕ್ತಿ ಸಮಿತಿಯು ವಿಚಾರಣೆ/ತನಿಖೆಯನ್ನು ನಡೆಸಲು ಕಾಲಮಿತಿಯನ್ನು ಸರ್ಕಾರದ ಹಂತದಲ್ಲಿ ನಿಗದಿಮಾಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಟಿಡಿ 30 ಟಿಡಿಎಸ್ 2025,**
**ಬೆಂಗಳೂರು, ದಿನಾಂಕ: 27 .05.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಟಿಡಿ 30 ಟಿಡಿಎಸ್ 2025, ದಿನಾಂಕ:10.03.2026 ರನ್ವಯ ಶ್ರೀ ಎನ್. ನಾರಾಯಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ನಂ. 226, 3ನೇ ಇ ಕ್ರಾಸ್, 3ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು-560043 ಇವರ ಅಧ್ಯಕ್ಷತೆಯಲ್ಲಿ ರಚಿಸಲಾದ ಏಕವ್ಯಕ್ತಿ ಸಮಿತಿಯು ಸಾರಿಗೆ ಇಲಾಖೆಯ

ಗ್ರೂಪ್-ಸಿ ನೌಕರರು ಸಂಜೆ ಕಾಲೇಜುಗಳಲ್ಲಿ ಡಿಪ್ಲೊಮಾ ಕೋರ್ಸುಗಳಿಗೆ ಪ್ರವೇಶ (Admission) ಪಡೆಯಲು ಸಲ್ಲಿಸಿರುವ ಸೇವಾನುಭವ ಪ್ರಮಾಣ ಪತ್ರಗಳ ನೈಜತೆ ಹಾಗೂ ಪ್ರವೇಶಾತಿಯ ಬಗ್ಗೆ **ತನಿಖೆ/ವಿಚಾರಣೆಯನ್ನು** ನಡೆಸಿ ಮೂರು (03) ತಿಂಗಳೊಳಗೆ ವರದಿಯನ್ನು ಸಲ್ಲಿಸಲು ಕಾಲಮಿತಿ ನಿಗದಿಪಡಿಸಿ ಆದೇಶಿಸಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Pushpa V.S.
(ಪುಷ್ಪ ವಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್-2) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು
2. ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, 1ನೇ ಮಹಡಿ, 'ಎ' ಬ್ಲಾಕ್, ಟಿ.ಟಿ.ಎಂ.ಸಿ. ಕಟ್ಟಡ ಶಾಂತಿನಗರ ಬೆಂಗಳೂರು-560027
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಭವನ ಅರಮನೆ ರಸ್ತೆ, ಬೆಂಗಳೂರು-560001
4. ಶ್ರೀ ಎನ್ ನಾರಾಯಣ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, 'ನ್ಯಾಯಸದನ', ನಂ 226, 3 ಇ ಕ್ರಾಸ್ 3ನೇ ಮುಖ್ಯ ರಸ್ತೆ, 3ನೇ ಬ್ಲಾಕ್ ಕಲ್ಯಾಣ ನಗರ, ಬೆಂಗಳೂರು-560043 **(ಸ್ಪೀಡ್ ಪೋಸ್ಟ್ ಮೂಲಕ)**

**ಪ್ರತಿ:**

1. ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಾರಿಗೆ ಇಲಾಖೆ
3. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಶಿಕ್ಷಣ ಇಲಾಖೆ( ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಸರ್ಕಾರದ ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಾರಿಗೆ ಇಲಾಖೆ
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

# ಅನುಬಂಧ-2

| ಕ್ರ.ಸಂ | ನೌಕರರ ಹೆಸರು | ಪದನಾಮ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ | ದಿ ಆಕ್ಸ್‌ವರ್ಡ್ ಸಂಜೆ ಕಾಲೇಜಿನಲ್ಲಿ ಪ್ರವೇಶ ಪಡೆದ ವರ್ಷ | ಪದವಿ ಪೂರ್ಣಗೊಳಿಸಿದ ವರ್ಷ (ಮಾಹಿತಿ ಸಲ್ಲಿಸಿದ ವಿವರ) |
|---|---|---|---|---|---|
| 1 | ರಾಜಶೇಖರ್ | ಅಧೀಕ್ಷಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2022-23 | ಮಾಹಿತಿ ಇರುವುದಿಲ್ಲ |
| 2 | ಅನಿಲ್ ಕುಮಾರ್.ಎಸ್ | ದ್ವಿತೀಯ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪೂರ್ವ) | 2022-23 | ಮಾಹಿತಿ ಇರುವುದಿಲ್ಲ |
| 3 | ಸಿದ್ದೇಶ್ವರ.ಎಸ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪೂರ್ವ) | 2022-23 | ಮಾಹಿತಿ ಇರುವುದಿಲ್ಲ |
| 4 | ಚೇತನ್ ಗೌಡ. ಟಿ.ಹೆಚ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪೂರ್ವ) | 2022-23 | ಮಾಹಿತಿ ಇರುವುದಿಲ್ಲ |
| 5 | ಯತೀಶ್. ಎಸ್.ಆರ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪೂರ್ವ) | 2022-23 | ಮಾಹಿತಿ ಇರುವುದಿಲ್ಲ |
| 6 | ಶಶಿಕುಮಾರ್ ಬಿ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಉತ್ತರ) | 2022-23 | ಮಾಹಿತಿ ಇರುವುದಿಲ್ಲ |
| 7 | ಯೋಗೇಂದ್ರ ಕೆ.ಎನ್. | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2022-23 | ಮಾಹಿತಿ ಇರುವುದಿಲ್ಲ |
| 8 | ಆದರ್ಶ.ಎನ್. | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಉತ್ತರ) | 2022-23 | ಮಾಹಿತಿ ಇರುವುದಿಲ್ಲ |
| 9 | ದಿಲೀಪ್ ಕುಮಾರ್ ಬಿ.ಎಸ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ತುಮಕೂರು | 2022-23 | ಮಾಹಿತಿ ಇರುವುದಿಲ್ಲ |
| 10 | ಚಂದ್ರಮೋಹನ್.ಎಸ್ | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2022-23 | ಮಾಹಿತಿ ಇರುವುದಿಲ್ಲ |
| 11 | ಅಶ್ವಿನ್ ವಿ. | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ದಕ್ಷಿಣ) | 2022-23 | ಮಾಹಿತಿ ಇರುವುದಿಲ್ಲ |
| 12 | ಜಯಂತ್.ವೈ. | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ದಕ್ಷಿಣ) | 2022-23 | ಮಾಹಿತಿ ಇರುವುದಿಲ್ಲ |
| 13 | ಗುರುರಾಜ್.ಜೆ. | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ದಕ್ಷಿಣ) | 2022-23 | ಮಾಹಿತಿ ಇರುವುದಿಲ್ಲ |
| 14 | ಹರೀಶ್ ಕುಮಾರ್.ವಿ | ಪ್ರಥಮ ದರ್ಜೆ ಸಹಾಯಕರು | ಜಂಟಿ ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು (ಗ್ರಾಮಾಂತರ) ವಿಭಾಗ. | 2022-23 | ಮಾಹಿತಿ ಇರುವುದಿಲ್ಲ |

| ಕ್ರ.ಸಂ | ನೌಕರರ ಹೆಸರು | ಪದನಾಮ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ | ದಿ ಆಕ್ಸ್‌ಫರ್ಡ್ ಸಂಜೆ ಕಾಲೇಜಿನಲ್ಲಿ ಪ್ರವೇಶ ಪಡೆದ ವರ್ಷ | ಪದವಿ ಪೂರ್ಣಗೊಳಿಸಿದ ವರ್ಷ (ಮಾಹಿತಿ ಸಲ್ಲಿಸಿದ ವಿವರ) |
|---|---|---|---|---|---|
| 15 | ಆನಂದ.ಬಿ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂ(ಉತ್ತರ) | 2022-23 | ಮಾಹಿತಿ ಇರುವುದಿಲ್ಲ |
| 16 | ರವಿಕಿರಣ್ ಡಿ.ಎಸ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂ(ಉತ್ತರ) | 2022-23 | ಮಾಹಿತಿ ಇರುವುದಿಲ್ಲ |
| 17 | ಆರ್. ಮನೋಹರ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್‌ಸಿಟಿ | 2022-23 | ಮಾಹಿತಿ ಇರುವುದಿಲ್ಲ |
| 18 | ಹರೀಶ | ಅಧೀಕ್ಷಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂ(ಉತ್ತರ) | 2023-24 | ಮಾಹಿತಿ ಇರುವುದಿಲ್ಲ |
| 19 | ದೊಡ್ಡಲಿಂಗಯ್ಯ, | ಅಧೀಕ್ಷಕರು | ಪ್ರಾದೇಶಿಕ ಸಾರಿಗೆ ಕಛೇರಿ, ಕೆ.ಆರ್. ಪುರಂ. | 2023-24 | ಮಾಹಿತಿ ಇರುವುದಿಲ್ಲ |
| 20 | ಎನ್ ಶಶಿಕುಮಾರ್ | ಅಧೀಕ್ಷಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ) | 2023-24 | ಮಾಹಿತಿ ಇರುವುದಿಲ್ಲ |
| 21 | ಹೆಚ್.ಆರ್ ಮೋಹನ್ ಕುಮಾರ | ದ್ವಿತೀಯ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಜ್ಞಾನಭಾರತಿ | 2023-24 | ಮಾಹಿತಿ ಇರುವುದಿಲ್ಲ |
| 22 | ಜಗದೀಶ್.ಜಿ | ದ್ವಿತೀಯ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಶಾಂತಿನಗರ (ಆಟೋರಿಕ್ಷಾ) | 2023-24 | ಮಾಹಿತಿ ಇರುವುದಿಲ್ಲ |
| 23 | ಪ್ರಜ್ವಲ್ ಪಾಠಣಕರ | ದ್ವಿತೀಯ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2023-24 | ಮಾಹಿತಿ ಇರುವುದಿಲ್ಲ |
| 24 | ನವೀನ್ ಕುಮಾರ್.ಹೆಚ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಜ್ಞಾನಭಾರತಿ | 2023-24 | ಮಾಹಿತಿ ಇರುವುದಿಲ್ಲ |
| 25 | ಜಾನ್ಸನ್ ಸ್ಟ್ಯಾಲಿನ್. | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2023-24 | ಮಾಹಿತಿ ಇರುವುದಿಲ್ಲ |
| 26 | ನಾಗಾರ್ಜುನ್ ಟಿ.ಎಸ್, | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2023-24 | ಮಾಹಿತಿ ಇರುವುದಿಲ್ಲ |
| 27 | ಅಂದ್ರು ಲೂಯಿಸ್ ಲೋಬೋ, | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2023-24 | ಮಾಹಿತಿ ಇರುವುದಿಲ್ಲ |
| 28 | ಲೋಕೇಶ್ ಎಂ, | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2023-24 | ಮಾಹಿತಿ ಇರುವುದಿಲ್ಲ |
| 29 | ನಟೇಶ್ ಟಿ.ಎಲ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಉತ್ತರ) | 2023-24 | ಮಾಹಿತಿ ಇರುವುದಿಲ್ಲ |

| ಕ್ರ.ಸಂ | ನೌಕರರ ಹೆಸರು | ಪದನಾಮ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ | ದಿ ಆಕ್ಸ್‌ವರ್ಡ್ ಸಂಜೆ ಕಾಲೇಜಿನಲ್ಲಿ ಪ್ರವೇಶ ಪಡೆದ ವರ್ಷ | ಪದವಿ ಪೂರ್ಣಗೊಳಿಸಿದ ವರ್ಷ (ಮಾಹಿತಿ ಸಲ್ಲಿಸಿದ ವಿವರ) |
|---|---|---|---|---|---|
| 30 | ಪ್ರಶಾಂತ್.ಎಸ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ನೆಲಮಂಗಲ | 2023-24 | ಮಾಹಿತಿ ಇರುವುದಿಲ್ಲ. |
| 31 | ಎಂ.ಎನ್ ಜೀವನ್ ರಾಜ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪಶ್ಚಿಮ) | 2023-24 | ಮಾಹಿತಿ ಇರುವುದಿಲ್ಲ. |
| 32 | ಸೈಯದ್ ನೂರ್ ಇ ಚೆಸ್ಕಿ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ದಕ್ಷಿಣ) | 2023-24 | ಮಾಹಿತಿ ಇರುವುದಿಲ್ಲ. |
| 33 | ಚೇತನ್ ಕುಮಾರ್ ಎಂ.ಬಿ, | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಜ್ಞಾನಭಾರತಿ | 2023-24 | ಮಾಹಿತಿ ಇರುವುದಿಲ್ಲ. |
| 34 | ಎಸ್. ನಿತ್ಯಾನಂದ, | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ). | 2023-24 | ಮಾಹಿತಿ ಇರುವುದಿಲ್ಲ. |
| 35 | ರಿಷಿಕ್.ಡಿ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪೂರ್ವ) | 2023-24 | ಮಾಹಿತಿ ಇರುವುದಿಲ್ಲ. |
| 36 | ಲಕ್ಷ್ಮಿಕಾಂತ ವೈ.ಡಿ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪಶ್ಚಿಮ) | 2023-24 | ಮಾಹಿತಿ ಇರುವುದಿಲ್ಲ. |
| 37 | ಮೊಹಮ್ಮದ್ ನಾಸೀರ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ) | 2023-24 | ಮಾಹಿತಿ ಇರುವುದಿಲ್ಲ. |
| 38 | ಲೋಕೇಶ್.ಬಿ | ವಾಹನ ಚಾಲಕರು | ಪ್ರಾದೇಶಿಕ ಸಾರಿಗೆ ಕಛೇರಿ, ಎಲೆಕ್ಟ್ರಾನಿಕ್‌ಸಿಟಿ | 2023-24 | ಮಾಹಿತಿ ಇರುವುದಿಲ್ಲ. |
| 39 | ಶಮೀಮ್ ದಂಧರಗಿ | ಶೀಘ್ರಲಿಪಿಗಾರರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ದಕ್ಷಿಣ) | 2023-24 | ಮಾಹಿತಿ ಇರುವುದಿಲ್ಲ. |
| 40 | ಮಧುಸೂಧನ್. ವಿ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂ(ಉತ್ತರ) | 2023-24 | ಮಾಹಿತಿ ಇರುವುದಿಲ್ಲ. |
| 41 | ಆನಂದಕುಮಾರ್ ಎನ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಕೆ.ಆರ್. ಪುರಂ. | 2023-24 | ಮಾಹಿತಿ ಇರುವುದಿಲ್ಲ. |
| 42 | ಪಿ.ಕುಮಾರಸ್ವಾಮಿ, | ಅಧೀಕ್ಷಕರು | ಪ್ರಾದೇಶಿಕ ಸಾರಿಗೆ ಕಛೇರಿ, ದಾವಣಗೆರೆ | 2024-25 | ಮಾಹಿತಿ ಇರುವುದಿಲ್ಲ. |
| 43 | ಎಂ.ಆರ್ ಗಿರೀಶ್ | ಅಧೀಕ್ಷಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ದಕ್ಷಿಣ) | 2024-25 | ಮಾಹಿತಿ ಇರುವುದಿಲ್ಲ. |
| 44 | ಉಮೇಶ್ ಬಿ.ಗಂಗನಹಳ್ಳಿ, | ಅಧೀಕ್ಷಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2024-25 | ಮಾಹಿತಿ ಇರುವುದಿಲ್ಲ. |

| ಕ್ರ.ಸಂ | ನೌಕರರ ಹೆಸರು | ಪದನಾಮ | ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿ | ದಿ ಲಾಕ್ಸವರ್ಡ್ ಸಂಜೆ ಕಾಲೇಜಿನಲ್ಲಿ ಪ್ರವೇಶ ಪಡೆದ ವರ್ಷ | ಪದವಿ ಪೂರ್ಣಗೊಳಿಸಿದ ವರ್ಷ (ಮಾಹಿತಿ ಸಲ್ಲಿಸಿದ ವಿವರ) |
|---|---|---|---|---|---|
| 45 | ಎನ್. ಲವಕುಮಾರ್ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಕೇಂದ್ರ) | 2024-25 | ಮಾಹಿತಿ ಇರುವುದಿಲ್ಲ. |
| 46 | ಶಶಾಂಕ್ ಹೆಚ್.ಪಿ, | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | 2024-25 | ಮಾಹಿತಿ ಇರುವುದಿಲ್ಲ. |
| **ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಗಳನುಸಾರ ಸಾರಿಗೆ ಇಲಾಖೆಯಲ್ಲಿ 2023 ರ ಮೊದಲು ಡಿಪ್ಲೋಮಾ ವಿದ್ಯಾರ್ಹತೆ ಪಡೆದು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಲಿಪಿಕ ನೌಕರರ ವಿವರ** | | | | | |
| 1 | ಮಂಜುನಾಥ.ಜಿ | ಪ್ರಥಮ ದರ್ಜೆ ಸಹಾಯಕರು | ಪ್ರಾದೇಶಿಕ ಸಾರಿಗೆ ಕಛೇರಿ, ಬೆಂಗಳೂರು (ಪಶ್ಚಿಮ) | ಸದರಿಯವರು 2011 ರಲ್ಲಿ ಡಿಪ್ಲೋಮಾ ವ್ಯಾಸಂಗವನ್ನು ಪೂರ್ಣಗೊಳಿಸಿರುತ್ತಾರೆ. | |
| 2 | ಚೇತನ್. ಎಸ್ | ಪ್ರಥಮ ದರ್ಜೆ ಸಹಾಯಕರು | ಸಾರಿಗೆ ಆಯುಕ್ತರ ಕಛೇರಿ, ಬೆಂಗಳೂರು | ಸದರಿಯವರು 2008 ರಲ್ಲಿ ಡಿಪ್ಲೋಮಾ ವ್ಯಾಸಂಗವನ್ನು ಪೂರ್ಣಗೊಳಿಸಿರುತ್ತಾರೆ. | |

ಅಪರ ಸಾರಿಗೆ ಆಯುಕ್ತರು (ಆಡಳಿತ)
ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರ
ಕಛೇರಿ, ಬೆಂಗಳೂರು

ಅನುಬಂಧ-3

ಕರ್ನಾಟಕ ಸರ್ಕಾರ
(ಸಾರಿಗೆ ಇಲಾಖೆ)

ಸಂಖ್ಯೆ: ಸಾಆ/ಸಿಬ್ಬಂದಿ-1/ವೈವ-132/1995-96
(CT/ADM/EST(EST-1)/28/2025)

ಸಾರಿಗೆ ಮತ್ತು ರಸ್ತೆ ಸುರಕ್ಷತೆ
ಆಯುಕ್ತರ ಕಛೇರಿ, 1ನೇ ಮಹಡಿ,
ಬಿ.ಎಂ.ಟಿ.ಸಿ. ಸಂಕೀರ್ಣ, ಕೆ.ಹೆಚ್. ರಸ್ತೆ,
ಶಾಂತಿನಗರ, ಬೆಂಗಳೂರು-27,
ದಿನಾಂಕ: 04-07-2026.

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಸಾರಿಗೆ ಇಲಾಖೆ, ಬಹುಮಹಡಿಗಳ ಕಟ್ಟಡ,
ಬೆಂಗಳೂರು-1.

ದೀಪ ಚೋಳನ್ ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ

ಮಾನ್ಯರೆ,

ವಿಷಯ : ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ/ ಪರಿಷ್ಕರಣೆ/ ಪುನರ್ ರಚನೆಯ ಬಗ್ಗೆ.

ಉಲ್ಲೇಖ : ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ/ ಪರಿಷ್ಕರಣೆ/ ಪುನರ್ ರಚನೆ ಸಮಿತಿ ಸಭೆಯ ನಡವಳಿಗಳ ದಿನಾಂಕ: 22-06-2026 ಮತ್ತು 04-07-2026.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ ಮೂರು ವರ್ಷ ಪೂರೈಸಿರುವುದರಿಂದ ಅದನ್ನು ತಿದ್ದುಪಡಿ/ ಪರಿಷ್ಕರಣೆ/ ಪುನರ್ ರಚನೆ ಮಾಡುವ ಸಂಬಂಧ ಇಲಾಖೆಯ ಹಿರಿಯ ಅಧಿಕಾರಿಗಳ ತಂಡವನ್ನು ರಚಿಸಿದ್ದು, ಸದರಿ ತಂಡವು ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ/ ಪರಿಷ್ಕರಣೆ/ ಪುನರ್ ರಚನೆಗೆ ಸಂಬಂಧಿಸಿದಂತೆ, ಇಲಾಖೆಯ ಪ್ರಸ್ತುತ ಅವಶ್ಯಕತೆಗನುಸಾರವಾಗಿ ಶಿಫಾರಸ್ಸುಗಳನ್ನು ಉಲ್ಲೇಖಿತ ನಡವಳಿಗಳಲ್ಲಿ ಸಲ್ಲಿಸಿರುತ್ತಾರೆ.

ಸಾರಿಗೆ ಇಲಾಖೆಯಲ್ಲಿ ಪ್ರಸ್ತುತ 274 ಮೋಟಾರು ವಾಹನ ನಿರೀಕ್ಷಕ ಹುದ್ದೆಗಳು ಖಾಲಿ ಇರುವ ಹಿನ್ನೆಲೆಯಲ್ಲಿ ತುರ್ತಾಗಿ ಅವುಗಳನ್ನು ಭರ್ತಿ ಮಾಡಬೇಕಾಗಿರುವುದರಿಂದ ಉಲ್ಲೇಖಿತ ನಡವಳಿಯ ದಿನಾಂಕ: 04-07-2026 ರಲ್ಲಿ ಸಮಿತಿಯು ಸಲ್ಲಿಸಿರುವ ಶಿಫಾರಸ್ಸುಗಳನ್ನು ಸರ್ಕಾರದ ಮುಂದಿನ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

ಆಯುಕ್ತರು
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.

**ದಿನಾಂಕ: 04-07-2026 ರಂದು ನಡೆದ ಸಾರಿಗೆ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ / ಪರಿಷ್ಕರಣೆ / ಪುನರ್ ರಚನೆ ಸಮಿತಿ ಸಭೆಯ ನಡವಳಿ:**

ಸರ್ಕಾರವು ಅಧಿಸೂಚನೆ ಸಂಖ್ಯೆ: ಸಾರಿಇ 94 ಸಾಇಸೇ 2018 (ಭಾಗ-2), ದಿನಾಂಕ: 22-07-2021 ರಲ್ಲಿ ಕರ್ನಾಟಕ ಸಾಮಾನ್ಯ ಸೇವೆಗಳು (ಮೋಟಾರು ವಾಹನಗಳ ಶಾಖೆ) (ನೇಮಕಾತಿ) ನಿಯಮಗಳು, 2021 ನ್ನು ರಚಿಸಿರುತ್ತದೆ.

ಅಲ್ಲದೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 40 ಟಿಡಿಎಸ್ 2021 (ಭಾಗ-1), ದಿನಾಂಕ: 12-10-2022 ರಲ್ಲಿ ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021 ಕ್ಕೆ ತಿದ್ದುಪಡಿ ತರುವ ಮೂಲಕ ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ 95% ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಹಾಗೂ 5% ರಷ್ಟು ಹುದ್ದೆಗಳನ್ನು ತಾಂತ್ರಿಕ ವಿದ್ಯಾರ್ಹತೆ ಹಾಗೂ ಮೋಟಾರು ವಾಹನ ನಿರೀಕ್ಷಕರ ಹುದ್ದೆಗೆ ನಿಗಧಿಪಡಿಸಿದ ದೈಹಿಕ ಮಾನದಂಡಗಳು ಹೊಂದಿರುವ ಪ್ರಥಮ ದರ್ಜೆ ಸಹಾಯಕರ, ಶೀಘ್ರಲಿಪಿಗಾರರ, ಹಿರಿಯ ಬೆರಳಚ್ಚುಗಾರರ ಮತ್ತು ಹಿರಿಯ ಚಾಲಕರ ಸಂಯೋಜಿತ ಜ್ಯೇಷ್ಠತೆಯ ಆಧಾರದ ಮೇಲೆ ಮುಂಬಡ್ತಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

ಸರ್ಕಾರದ ಪತ್ರ ದಿನಾಂಕ: 17-08-2024 ರಲ್ಲಿ ನೀಡಿರುವ ನಿರ್ದೇಶನದಂತೆ ಪ್ರಸ್ತುತ ಜಾರಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ / ಪರಿಷ್ಕರಣೆ / ಪುನರ್ ರಚನ ಮಾಡಲು ಇಲಾಖೆಯ ಹಿರಿಯ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿರುತ್ತದೆ.

ಸಾರಿಗೆ ಇಲಾಖೆಯು ಅತ್ಯಂತ ಹೆಚ್ಚು ರಾಜಸ್ವ ಸಂಗ್ರಹಿಸುವ ಪ್ರಮುಖ ಇಲಾಖೆಗಳಲ್ಲೊಂದಾಗಿದೆ. ಈ ಇಲಾಖೆಯು ಸಾರ್ವಜನಿಕರಿಗೆ ವಾಹನ ಚಾಲನಾ ಅನುಜ್ಞಾ ಪತ್ರ ನೀಡುವಿಕೆ, ವಾಹನ ನೋಂದಣಿ, ರಹದಾರಿ ನೀಡುವಿಕೆ, ರಾಜಸ್ವ ಸಂಗ್ರಹಣೆ, ಪ್ರವರ್ತನ ಚಟುವಟಿಕೆಗಳು, ರಸ್ತೆ ಅಪಘಾತಗಳ ನಿಯಂತ್ರಣ ಮುಂತಾದ ಅತ್ಯಂತ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತಾ ಬಂದಿದೆ. ಪ್ರತಿ ಸಾಲಿನಲ್ಲಿ ಗಣನೀಯವಾಗಿ ಹೆಚ್ಚುತ್ತಿರುವ ವಾಹನಗಳ ನಿಯಂತ್ರಣ ಮತ್ತು ರಸ್ತೆ ಸುರಕ್ಷತೆಯ ನಿರ್ವಹಣೆ ಇಲಾಖೆಗೆ ಸವಾಲಾಗಿ ಪರಿಣಮಿಸಿದೆ. ಈ ಎಲ್ಲಾ ಸವಾಲುಗಳನ್ನು ನಿರ್ವಹಿಸಲು ಇಲಾಖೆಗೆ ನುರಿತ ಮತ್ತು ಸದೃಢವಾದ ಕಾರ್ಯಪಡೆಗಳುಳ್ಳ ಅಧಿಕಾರಿ ಮತ್ತು ಸಿಬ್ಬಂದಿಗಳ ಅತ್ಯಂತ ಅವಶ್ಯಕತೆ ಇದ್ದು ಹಾಗೂ ಅವರು ಆದ್ಯತೆಯಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ. ಇಲಾಖೆಯಲ್ಲಿ ಮಂಜೂರಾದ ಮತ್ತು ಲಭ್ಯವಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸಾರ್ವಜನಿಕ ಮತ್ತು ಇಲಾಖೆಯ ಒಳತಿಗಾಗಿ ಪುನರ್ ರಚಿಸಿ ಕೌಶಲ್ಯ ಅಭಿವೃದ್ಧಿಯತ್ತ ಇಲಾಖೆಯು ಮುಂದುವರಿಯಬೇಕಾಗಿರುತ್ತದೆ.

ರಾಜಸ್ವ ಸಂಗ್ರಹಣೆಯು ಇಲಾಖೆಯ ಮುಖ್ಯ ಗುರಿಯಾಗಿದ್ದು, 2015-16 ನೇ ಸಾಲಿನಲ್ಲಿ ಸುಮಾರು ರೂ. 4,000 ಕೋಟಿಗಳಷ್ಟು ರಾಜಸ್ವ ಸಂಗ್ರಹಣೆಯ ಗುರಿ ನಿಗದಿಯಾಗಿದ್ದು, ಪ್ರಸ್ತುತ 2026-27 ನೇ ಸಾಲಿನಲ್ಲಿ ಸುಮಾರು ರೂ. 15,500 ಕೋಟಿಗಳ ರಾಜಸ್ವ ಗುರಿಯನ್ನು ಸರ್ಕಾರವು ನಿಗಧಿಪಡಿಸಿದೆ.

ಪ್ರಸ್ತುತ ಸಾರಿಗೆ ಇಲಾಖೆಯು ಪ್ರತಿ ಆರ್ಥಿಕ ವರ್ಷದಲ್ಲಿ ರಸ್ತೆ ಸುರಕ್ಷತಾ ನಿಧಿಗೆ ಸರಾಸರಿ ರೂ. 200 ಕೋಟಿಗಳನ್ನು ಸಂಗ್ರಹಿಸಿ ನೀಡುತ್ತಿದೆ. ಗೌ|| ಸರ್ವೋಚ್ಚ ನ್ಯಾಯಾಲಯದ ರಸ್ತೆ ಸುರಕ್ಷತಾ ಸಮಿತಿಯು ರಸ್ತೆ ಸುರಕ್ಷತೆಯನ್ನು ಕಾಪಾಡಲು ಪ್ರವರ್ತನ ಚಟುವಟಿಕೆಗಳ ಗುರಿ ನೀಡಿದ್ದು, ಅದನ್ನು ಸಾಧಿಸಲು ಪ್ರವರ್ತನ ಕಾರ್ಯಗಳನ್ನು ನಡೆಸಬೇಕಾಗಿರುವುದರಿಂದ ಮೋಟಾರು ವಾಹನ ನಿರೀಕ್ಷಕರ ಹುದ್ದೆಗಳ ತೀವ್ರ ಅವಶ್ಯಕತೆ ಇರುತ್ತದೆ.

ಕರ್ನಾಟಕ ರಾಜ್ಯದಲ್ಲಿ ಮಾರ್ಚ್ - 2026 ರ ಅಂತ್ಯಕ್ಕೆ ಸುಮಾರು 3.47 ಕೋಟಿ ವಿವಿಧ ರೀತಿಯ ವಾಹನಗಳು ಸಂಚರಿಸುತ್ತಿದ್ದು, ಹೀಗಾಗಿ ಹೆಚ್ಚುತ್ತಿರುವ ವಾಹನಗಳ ಸಂಖ್ಯೆಗನುಗುಣವಾಗಿ ಮೋಟಾರು ವಾಹನ ನಿರೀಕ್ಷಕರುಗಳು ಇರುವುದಿಲ್ಲ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರಿಂದ ದೈನಂದಿನ ಸಾರ್ವಜನಿಕರ ಕಾರ್ಯಗಳನ್ನು ನಿರ್ವಹಿಸುತ್ತಿರುವುದೇ ಕಷ್ಟಕರವಾಗಿದ್ದು, ಪ್ರವರ್ತನ/ ತಪಾಸಣಾ ಕಾರ್ಯವನ್ನು ಪೂರ್ಣವಾಗಿ ನಿರ್ವಹಿಸಲಾಗದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದಾಗಿ ಇಲಾಖೆಯು ಸಾರ್ವಜನಿಕರಿಂದ ನಿಂದನೆಗೆ ಒಳಗಾಗುತ್ತಿದೆ. ಇದಲ್ಲದೆ ಇಲಾಖೆಗೆ ನಿಗದಿಪಡಿಸಿದ/ ನಿಗದಿಪಡಿಸುವ ರಾಜಸ್ವದ ಗುರಿ ತಲುಪುವಲ್ಲಿ ತೊಂದರೆಯಾಗಲಿದೆ.

ಪ್ರಸ್ತುತ ಮೋಟಾರು ವಾಹನ ನಿರೀಕ್ಷಕರ ವೃಂದದಲ್ಲಿ ಮಂಜೂರಾದ, ಕಾರ್ಯನಿರತ ಹಾಗೂ ಖಾಲಿ ಹುದ್ದೆಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಹುದ್ದೆಯ ಹೆಸರು | ಹುದ್ದೆಗಳ ವಿವರ | | |
|---|---|---|---|---|
| | | ಮಂಜೂರು | ಕಾರ್ಯನಿರತ | ಖಾಲಿ |
| 01 | ಮೋಟಾರು ವಾಹನ ನಿರೀಕ್ಷಕರು | 430 | 154 | 276 |

ಪ್ರಸ್ತುತ ಮೋಟಾರು ವಾಹನ ನಿರೀಕ್ಷಕರ ಹುದ್ದೆಯ ಮುಂಬಡ್ತಿಗಾಗಿ ಈಗಾಗಲೇ ನಿಗದಿಪಡಿಸಿರುವಂತೆ ಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರ, ಹಿರಿಯ ಬೆರಳಚ್ಚುಗಾರ ಮತ್ತು ಹಿರಿಯ ಚಾಲಕರುಗಳು ನೇರ ನೇಮಕಾತಿಗಾಗಿ ನಿಗದಿಪಡಿಸಲಾದ ಶೈಕ್ಷಣಿಕ ಅರ್ಹತೆಯನ್ನು ಪಡೆದ ನಂತರ ಮೂರು ವರ್ಷಗಳನ್ನು ಪೂರೈಸಿರಬೇಕು ಎಂದು ಇರುವ ಕನಿಷ್ಠ ಅರ್ಹತೆಯನ್ನು ಕೈಬಿಡಲು ಹಾಗೂ ಮೋಟಾರು ವಾಹನ ನಿರೀಕ್ಷಕರ ಹುದ್ದೆಯ ಬಡ್ತಿಗೆ ನಿಗದಿಪಡಿಸಿದ ಗರಿಷ್ಠ 50 ವರ್ಷದ ವಯೋಮಿತಿಯನ್ನು 55 ವರ್ಷಕ್ಕೆ ಹೆಚ್ಚಿಸಲು ಶಿಫಾರಸ್ಸು ಮಾಡಲಾಗಿದೆ.

ಈ ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ **ಅನುಬಂಧ-I** ರಲ್ಲಿ ವಿವರಿಸಿರುವಂತೆ ತಿದ್ದುಪಡಿ / ಪರಿಷ್ಕರಣೆ ಮಾಡಲು ಶಿಫಾರಸ್ಸು ಮಾಡಲಾಗಿದೆ.

ಶ್ರೀ ಸಿ. ಮಲ್ಲಿಕಾರ್ಜುನ್,
ಅಪರ ಸಾರಿಗೆ ಆಯುಕ್ತರು (ಆಡಳಿತ),
ಬೆಂಗಳೂರು.

ಶ್ರೀ ಉಮಾಶಂಕರ್ ಬಿ.ಪಿ,
ಅಪರ ಸಾರಿಗೆ ಆಯುಕ್ತರು ಹಾಗೂ
ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಾರಿಗೆ
ಪ್ರಾಧಿಕಾರ, ಬೆಂಗಳೂರು.

ಶ್ರೀ ಜಿ. ಜ್ಞಾನೇಂದ್ರ ಕುಮಾರ್,
ಅಪರ ಸಾರಿಗೆ ಆಯುಕ್ತರು, ಪರಿಸರ ಮತ್ತು
ಇ-ಆಡಳಿತ, ಬೆಂಗಳೂರು.

ಶ್ರೀಮತಿ ಎಂ. ಪಿ. ಓಂಕಾರೇಶ್ವರಿ,
ಅಪರ ಸಾರಿಗೆ ಆಯುಕ್ತರು, ಪ್ರವರ್ತನ
(ದಕ್ಷಿಣ), ಬೆಂಗಳೂರು.

ಶ್ರೀಮತಿ ಎಂ.ಶೋಭ, 4/7/26
ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು
(ನಗರ) ವಿಭಾಗ, ಬೆಂಗಳೂರು.

## ಅನುಬಂಧ -I

| ಕ್ರ.ಸಂ | ಹುದ್ದೆಯ ವರ್ಗ ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | | | ಪ್ರಸ್ತುತ ಜಾರಿಯಲ್ಲಿರುವ ನೇಮಕಾತಿ ವಿಧಾನ: ನೇಮಕಾತಿವಿಧಾನ | ಕನಿಷ್ಠ ಅರ್ಹತೆ | ವೃಂದ ಮತ್ತು ನೇಮಕಾತಿ ನಿಯಮಗಳನ್ನು ತಿದ್ದುಪಡಿ / ಪರಿಷ್ಕರಿಸಲು ಶಿಫಾರಸ್ಸು ಮಾಡಿದ ಅಂಶಗಳು |
|---|---|---|---|---|---|---|---|
| | | ಖಾಯಂ | ತಾತ್ಕಾಲಿಕ | ಒಟ್ಟು | | | |
| 1 | 2 | 3 | 4 | 5 | 6 | 7 | 8 |
| 1. | ಮೋಟಾರು ವಾಹನ ನಿರೀಕ್ಷಕರು<br>IMV<br>(54175-99400) | 317 | 113 | 430 | ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021ರ ಅನುಸಾರ ಶೇಕಡ 95ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ; ಶೇಕಡ 5ರಷ್ಟು ಹುದ್ದೆಗಳನ್ನುಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರ, ಹಿರಿಯ ಬೆರಳಚ್ಚುಗಾರ ಮತ್ತು ಹಿರಿಯ ಚಾಲಕರ ಸಂಯೋಜಿತ ಜ್ಯೇಷ್ಠತೆ ಆಧಾರದ ಮೇಲೆ ಒಂದು ವೇಳೆ ಬಡ್ತಿಗಾಗಿ ಯಾವುದೇ ಸೂಕ್ತ ವ್ಯಕ್ತಿ ಇಲ್ಲದಿದ್ದರೆ, ನೇರ ನೇಮಕಾತಿ ಮೂಲಕ. | **ನೇರನೇಮಕಾತಿಗೆ.-**<br>(1)ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಉತ್ತೀರ್ಣರಾಗಿರತಕ್ಕದ್ದು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.<br>(2) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಸ್ಥೆಯಿಂದ ನೀಡಲಾಗುವ ಮೂರು ವರ್ಷಗಳ ಅವಧಿಯ ಆಟೋಮೊಬೈಲ್ ಇಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾವನ್ನುಹೊಂದಿರಬೇಕು ; ಅಥಾವಾ ಕಾನೂನಿನ ಮೂಲಕ ಸ್ಥಾಪಿಸಲಾದ ವಿಶ್ವವಿದ್ಯಾನಿಲಯದಿಂದ ಆಟೋಮೊಬೈಲ್ ಇಂಜಿನಿಯರಿಂಗ್ ಅಥವಾ ಮೆಕ್ಯಾನಿಕಲ್ | ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು 2021ರ ಅನುಸಾರ ಶೇಕಡ 95ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ; ಶೇಕಡ 5ರಷ್ಟು ಹುದ್ದೆಗಳನ್ನು ಪ್ರಥಮ ದರ್ಜೆ ಸಹಾಯಕ, ಶೀಘ್ರಲಿಪಿಗಾರ, ಹಿರಿಯ ಬೆರಳಚ್ಚುಗಾರ ಮತ್ತು ಹಿರಿಯ ಚಾಲಕರ ಸಂಯೋಜಿತ ಜ್ಯೇಷ್ಠತೆ ಆಧಾರದ ಮೇಲೆ.<br>**ಮುಂಬಡ್ತಿಗಾಗಿ**<br>(1) ನೇರ ನೇಮಕಾತಿಗಾಗಿ ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ದೈಹಿಕ ಮಾನದಂಡಗಳನ್ನು ಹೊಂದಿರಬೇಕು.<br>(2) ಈ ಕೆಳಕಂಡ ಗ್ರೂಪ್-ಸಿ ಕೇಡರ್‌ಗಳಲ್ಲಿ ಎಂಟು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಹೊಂದಿರಬೇಕು, ಅದರಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಪ್ರಥಮ |

| | | | | | | | |
|---|---|---|---|---|---|---|---|
| | | | | | | ಇಂಜಿನಿಯರಿಂಗ್‌ನಲ್ಲಿ ಪದವಿ;<br><br>3) ಗೇರು ಹೊಂದಿರುವ ಮೋಟಾರು ಸೈಕಲ್ ಮತ್ತು ಲಘು ಮೋಟಾರು ವಾಹನಗಳನ್ನು ಚಾಲನೆ ಮಾಡಲು ಅಧಿಕೃತಗೊಳಿಸಿರುವ ವಾಹನ ಪರವಾನಗಿಯನ್ನು ಹೊಂದಿರತಕ್ಕದ್ದು. ಮತ್ತು<br><br>4) ಈ ಮುಂದಿನ ಕನಿಷ್ಠ ದೈಹಿಕ ಮಾನದಂಡಗಳನ್ನು ಹೊಂದಿರತಕ್ಕದ್ದು.<br>**(ಎ) <u>ಪುರುಷರಿಗೆ</u>**<br><br>ಎತ್ತರ: 168 ಸೆಂ.ಮೀ.ಗಳು<br>ಎದೆಯ ಸುತ್ತಳತೆ: ಪೂರ್ತಿ ಉಬ್ಬಿಸಿದಾಗ 86 ಸೆಂ.ಮೀ.ಗಳು.<br><br>(ಕನಿಷ್ಠ ಉಬ್ಬಿಸಿದಾಗ 5 ಸೆಂ.ಮೀ.ಗಳು.)<br><br>**(ಬಿ) ಮಹಿಳೆಯ<u>ರಿಗೆ</u>**<br>ಎತ್ತರ: 157 ಸೆಂ.ಮೀ.ಗಳು<br>ತೂಕ: 49 ಕೆ.ಜಿ<br><br>(ಸಿ)ಪುರುಷರು ಮತ್ತು ಮಹಿಳೆಯರಿಗೆ (ಸಾಮಾನ್ಯ ಮಾನದಂಡಗಳು) | ದರ್ಜೆ ಸಹಾಯಕ ಅಥವಾ ಶೀಘ್ರಲಿಪಿಗಾರ ಅಥವಾ ಹಿರಿಯ ಬೆರಳಚ್ಚುಗಾರ ಅಥವಾ ಹಿರಿಯ ಚಾಲಕರು ಹುದ್ದೆಯಲ್ಲಿ ಸೇವೆ ಸಲ್ಲಿಸಿರಬೇಕು.<br><br>ಪರಂತು ಪ್ರಥಮ ದರ್ಜೆ ಸಹಾಯಕ ಅಥವಾ ಶೀಘ್ರಲಿಪಿಗಾರ ಅಥವಾ ಹಿರಿಯ ಬೆರಳಚ್ಚುಗಾರ ಅಥವಾ ಹಿರಿಯ ಚಾಲಕ ವೃಂದದಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಪೂರೈಸಿದ ನೌಕರರು ಲಭ್ಯವಿಲ್ಲದಿದ್ದಲ್ಲಿ, ಕನಿಷ್ಠ ಎರಡು ವರ್ಷಗಳನ್ನು ಪೂರೈಸಿರುವ ಮೇಲೆ ತಿಳಿಸಲಾದ ವೃಂದದ ನೌಕರರನ್ನು ಮುಂಬಡ್ತಿಗೆ ಪರಿಗಣಿಸಬಹುದಾಗಿದೆ.<br><br>(3) ಬಡ್ತಿಯ ಸಮಯದಲ್ಲಿ ಐವತ್ತೈದು ವರ್ಷ ವಯಸ್ಸನ್ನು ತಲುಪಿರಬಾರದು. |

(ಎ) **ದೃಷ್ಟಿ:** ಈ ಮುಂದಿನ ಪ್ರಮಾಣಿತ ದೂರ, ಸಮೀಪ ದೃಷ್ಟಿಯನ್ನು ಕನ್ನಡಕದೊಂದಿಗೆ ಅಥವಾ ಕನ್ನಡಕವಿಲ್ಲದೆ ಹೊಂದಿರತಕ್ಕದ್ದು.

| | ಉತ್ತಮ ನೇತ್ರ | ಕನಿಷ್ಠ ನೇತ್ರ |
|---|---|---|
| (i) ದೂರ ದೃಷ್ಟಿ | 6/9<br>6/9<br>ಅಥವಾ | 6/9<br>6/12 |
| (ii) ಸಮೀಪದದೃಷ್ಟಿ | 0/6 | 0/8 |

ಪ್ರತಿಯೊಂದು ಕಣ್ಣು ಪೂರ್ಣ ಕ್ಷೇತ್ರ ದೃಷ್ಟಿಯನ್ನು ಹೊಂದಿರತಕ್ಕದ್ದು. ವರ್ಣಾಂಧತೆ, ಮೆಳ್ಳಗಣ್ಣು ಅಥವಾ ಕಣ್ಣುಗಳ ಅಥವಾ ಎರಡೂ ಕಣ್ಣುಗುಡ್ಡೆಗಳ ಯಾವುದೇ ಅನಾರೋಗ್ಯ ಲಕ್ಷಣಗಳಿದ್ದಲ್ಲಿ ಅನರ್ಹಗೊಳ್ಳತಕ್ಕದ್ದು.

**(ಬಿ)ಶ್ರವಣ :**

(i) ರಿನ್ನರ್ಸ್ ಪರೀಕ್ಷೆ,

(ii) ವೆಬ್ಬರ್ಸ್ ಪರೀಕ್ಷೆ,

(iii) Vertigo ಪರೀಕ್ಷೆ,

ಮೇಲೆ ನಮೂದಿಸಿರುವ ಪರೀಕ್ಷೆಯಲ್ಲಿ ಯಾವುದೇ ದೋಷಗಳಿದ್ದರೆ ಅನರ್ಹಗೊಳ್ಳತಕ್ಕದ್ದು.

| | | | | | | | |
|---|---|---|---|---|---|---|---|
| | | | | | | (ಸಿ) ಈ ಕೆಳಗಿನ ಯಾವುದಾದರೂ ಒಂದನ್ನು ಹೊಂದಿದ್ದರೂ ದೈಹಿಕ ಅನರ್ಹತೆಯಾಗಿರತಕ್ಕದ್ದು:<br><br>(i) ಬಾಗಿರುವ ಮಂಡಿಗಳು (knock knees)<br>(ii) ಬಗ್ಗಿದ ಕಾಲುಗಳು (bow legs)<br>(iii) ಚಪ್ಪಟೆ ಅಥವಾ ಮಟ್ಟಸ ಪಾದಗಳು (flat feet)<br>(iv) ಉಬ್ಬು ರಕ್ತನಾಳಗಳು (Varicose Veins)<br><br>(ಡಿ) ಈ ಉದ್ದೇಶಕ್ಕಾಗಿ ರಚಿಸಲಾದ ವೈದ್ಯಕೀಯ ಮಂಡಳಿಯು ಪ್ರಮಾಣಿಸಿದ ಎಲ್ಲಾ ಜನ್ಮಜಾತ (congenital) ರೋಗಗಳು ಮತ್ತು ವಿರೂಪಗಳಿಂದ (deformities) ಮುಕ್ತವಾಗಿರತಕ್ಕದ್ದು.<br><br>**ಮುಂಬಡ್ತಿಗಾಗಿ:-**<br><br>(1) ನೇರ ನೇಮಕಾತಿಗಾಗಿ ನಿಗದಿಪಡಿಸಿದ ಶೈಕ್ಷಣಿಕ ವಿದ್ಯಾರ್ಹತೆ ಮತ್ತು ದೈಹಿಕ ಮಾನದಂಡಗಳನ್ನು ಹೊಂದಿರಬೇಕು.<br><br>(2) ಗ್ರೂಪ್-ಸಿ ಕೇಡರ್‌ಗಳಲ್ಲಿ ಎಂಟು ವರ್ಷಗಳಿಗಿಂತ | |

| | | | | | | | |
|---|---|---|---|---|---|---|---|
| | | | | | | ಕಡಿಮೆಯಿಲ್ಲದ ಸೇವೆಯನ್ನು ಹೊಂದಿರಬೇಕು, ಅದರಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಪ್ರಥಮ ದರ್ಜೆ ಸಹಾಯಕ ಅಥವಾ ಶೀಘ್ರಲಿಪಿಗಾರ ಅಥವಾ ಹಿರಿಯ ಬೆರಳಚ್ಚುಗಾರ ಅಥವಾ ಹಿರಿಯ ಚಾಲಕರು ಹುದ್ದೆಯಲ್ಲಿ ಸೇವೆ ಸಲ್ಲಿಸಿರಬೇಕು ಮತ್ತು ನೇರ ನೇಮಕಾತಿಗಾಗಿ ಸೂಚಿಸಲಾದ ಶೈಕ್ಷಣಿಕ ಅರ್ಹತೆಯನ್ನು ಪಡೆದು ಮೂರು ವರ್ಷಗಳನ್ನು ಪೂರೈಸಿರಬೇಕು.<br><br>ಪರಂತುಪ್ರಥಮ ದರ್ಜೆ ಸಹಾಯಕ ಅಥವಾ ಶೀಘ್ರಲಿಪಿಗಾರ ಅಥವಾ ಹಿರಿಯ ಬೆರಳಚ್ಚುಗಾರ ಅಥವಾ ಹಿರಿಯ ಚಾಲಕ ವೃಂದದಲ್ಲಿ ಕನಿಷ್ಠ ಮೂರು ವರ್ಷಗಳ ಸೇವೆಯನ್ನು ಪೂರೈಸಿದ ನೌಕರರು ಲಭ್ಯವಿಲ್ಲದಿದ್ದಲ್ಲಿ, ಕನಿಷ್ಠ ಎರಡು ವರ್ಷಗಳನ್ನು ಪೂರೈಸಿರುವ ಮೇಲೆ ತಿಳಿಸಲಾದ ವೃಂದದ ನೌಕರರನ್ನು ಮುಂಬಡ್ತಿಗೆ ಪರಿಗಣಿಸಬಹುದಾಗಿದೆ.<br><br>(3) ಬಡ್ತಿಯ ಸಮಯದಲ್ಲಿ ಐವತ್ತು ವರ್ಷ ವಯಸ್ಸನ್ನು ತಲುಪಿರಬಾರದು.<br><br>ಸೂಚನೆ:- ಪ್ರಥಮ ದರ್ಜೆ | |

| | | | | | | | |
|---|---|---|---|---|---|---|---|
| | | | | | | ಸಹಾಯಕ ಅಥವಾ ಶೀಘ್ರಲಿಪಿಗಾರ ಅಥವಾ ಹಿರಿಯ ಬೆರಳಚ್ಚುಗಾರ ಅಥವಾ ಹಿರಿಯ ಚಾಲಕ ವೃಂದದ ವ್ಯಕ್ತಿಯು ಅಧೀಕ್ಷಕ ಅಥವಾ ಮೋಟಾರು ವಾಹನ ನಿರೀಕ್ಷಕ ಹುದ್ದೆಯನ್ನು ಪರಿಗಣಿಸುವ ಸಮಯದಲ್ಲಿ ಹಿಂದಕ್ಕೆ ತೆಗೆದುಕೊಳ್ಳಲಾಗದ ಆಯ್ಕೆಯನ್ನು ಚಲಾಯಿಸಬೇಕು. | |

ಶ್ರೀ ಕೆ. ಮಲ್ಲಿಕಾರ್ಜುನ್,
ಅಪರ ಸಾರಿಗೆ ಆಯುಕ್ತರು (ಆಡಳಿತ),
ಬೆಂಗಳೂರು.

ಶ್ರೀ ಉಮಾಶಂಕರ್ ಬಿ.ಪಿ.,
ಅಪರ ಸಾರಿಗೆ ಆಯುಕ್ತರು ಹಾಗೂ
ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸಾರಿಗೆ ಪ್ರಾಧಿಕಾರ,
ಬೆಂಗಳೂರು.

ಶ್ರೀ ಜಿ. ಜ್ಞಾನೇಂದ್ರ ಕುಮಾರ್,
ಅಪರ ಸಾರಿಗೆ ಆಯುಕ್ತರು, ಪರಿಸರ ಮತ್ತು ಇ-ಆಡಳಿತ,
ಬೆಂಗಳೂರು.

ಶ್ರೀಮತಿ ಎಂ. ಪಿ. ಓಂಕಾರೇಶ್ವರಿ,
ಅಪರ ಸಾರಿಗೆ ಆಯುಕ್ತರು, ಪ್ರವರ್ತನ (ದಕ್ಷಿಣ),
ಬೆಂಗಳೂರು.

ಶ್ರೀಮತಿ ಎಂ.ಶೋಭ, 4/7/24
ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ) ವಿಭಾಗ,
ಬೆಂಗಳೂರು.